ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 586

ಸದಸ್ಯರ ಹೆಸರು : ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 05/02/2021

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ಗೌರವಧನ ಎಷ್ಟು; ಅವರ ದಿನದ ಕಾರ್ಯಾವಧಿ ಎಷ್ಟು; (ವಿವರ ನೀಡುವುದು.)</td><td>ರಾಜ್ಯದಲ್ಲಿ 65911 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ಈ ಕೆಳಕಂಡಂತೆ ಗೌರವಧನವನ್ನು ಪಾವತಿಸಲಾಗುತ್ತಿದೆ.
<table><tr><th>ಹುದ್ದೆ</th><th>ಪಾವತಿಸುತ್ತಿರುವ ಗೌರವಧನ</th></tr><tr><td>ಅಂಗನವಾಡಿ ಕಾರ್ಯಕರ್ತೆ</td><td>ರೂ.10,000/-</td></tr><tr><td>ಮಿನಿ ಅಂಗನವಾಡಿ ಕಾರ್ಯಕರ್ತೆ</td><td>ರೂ.6,250/-</td></tr><tr><td>ಅಂಗನವಾಡಿ ಸಹಾಯಕಿ</td><td>ರೂ.5,250/-</td></tr></table>
ಅಂಗನವಾಡಿ ಕಾರ್ಯಕರ್ತೆಯರ ಕಾರ್ಯಾವಧಿ ಬೆಳಿಗ್ಗೆ 9.30 ರಿಂದ ಸಂಜೆ 4.00 ರವರೆಗೆ.</td></tr>
<tr><td>ಆ.</td><td>ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?</td><td>ಬಂದಿದೆ.

ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ವಹಿಸಲಾಗುತ್ತಿದೆ.
<table><tr><th>ಕ್ರ ಸಂ</th><th>ಬೇಡಿಕೆ</th><th>ಕೈಗೊಂಡ ಕ್ರಮ</th></tr><tr><td>1</td><td>ಅಂ.ಕಾರ್ಯಕರ್ತೆಯರ ಕೆಲಸವನ್ನು ಖಾಯಂ ಗೊಳಿಸಬೇಕು ಅಥವಾ ಕನಿಷ್ಠ ವೇತನವನ್ನು ಮಾಡಬೇಕು.</td><td>ಅಂ.ಕಾರ್ಯಕರ್ತೆ / ಸಹಾಯಕಿಯರು ಗೌರವಧನ ಸೇವೆಗೆ ಸೇರಿದ್ದು, ಗೌರವಧನವನ್ನು ನೀಡಲಾಗುತ್ತಿದೆ. ಇವರ ಹುದ್ದೆಯನ್ನು ಖಾಯಂಗೊಳಿಸುವ ವಿಷಯ ಮತ್ತು ಕನಿಷ್ಠ ವೇತನ ನಿಯಮ ಅನ್ವಯಿಸುವುದಿಲ್ಲ.</td></tr><tr><td>2</td><td>ಐ.ಸಿ.ಡಿ.ಎಸ್.ಯೋಜನೇತರ ಕೆಲಸವನ್ನು ವಹಿಸುವುದನ್ನು ನಿಲ್ಲಿಸುವುದು.</td><td>ಐ.ಸಿ.ಡಿ.ಎಸ್. ಯೋಜನೆಯನ್ನು ಹೊರತುಪಡಿಸಿ ಇತರೆ ಕೆಲಸ ಕಾರ್ಯಗಳನ್ನು ವಹಿಸದಿರುವ ಬಗ್ಗೆ ಈಗಾಗಲೇ ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಉಪ ನಿರ್ದೇಶಕರುಗಳಿಗೆ ಪತ್ರ ಬರೆಯಲಾಗಿದೆ.</td></tr></table></td></tr>
</table>

3	ಅಂ.ಕಾರ್ಯಕರ್ತೆಯರಿಗೆ ಇ.ಎಸ್.ಐ. / ಪಿ.ಎಫ್. ಜಾರಿಗೊಳಿಸುವುದು.	ಅಂ.ಕಾರ್ಯಕರ್ತೆ/ಸಹಾಯಕಿಯರು ಗೌರವ ಸೇವೆಗೆ ಸೇರಿರುವುದರಿಂದ ಇ.ಎಸ್.ಐ. / ಪಿ.ಎಫ್. ನಿಯಮ ಅನ್ವಯಿಸುವುದಿಲ್ಲ.
4	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಗೌರವಧನವನ್ನು ಹೆಚ್ಚಿಸುವ ಕುರಿತು.	ಕಳೆದ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕಿಯರ ಗೌರವಧನವನ್ನು ಹೆಚ್ಚಿಸಿರುವುದರಿಂದ, ಪ್ರಸ್ತುತ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ.

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಸಂ:ಮಮಇ 61 ಐಸಿಡಿ 2021